ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,
ತಿ. ನರಸೀಪುರ

ಸಿ ಸಿ ಸಂಖ್ಯೆ: 05/2022

## ದೋಷಾರೋಪಣೆ

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ ನರಸೀಪುರ ಆದ ನಾನು

1. ಅರುಣ್ ಕುಮಾರ್ ಬಿನ್ ಮಹದೇವಸ್ವಾಮಿ
   31 ವರ್ಷ, ವಾಸಃ ಭೈರಾಪುರ ಗ್ರಾಮ,
   ತಿ ನರಸೀಪುರ ಪಟ್ಟಣ, ಮೈಸೂರು ಜಿಲ್ಲೆ.

2. ಕಿರಣ್ ಬಿನ್ ನಾಗರಾಜು
   26 ವರ್ಷ, ವಾಸಃತ್ರೀವೇಣಿ ನಗರ,
   ತಿ ನರಸೀಪುರ ಪಟ್ಟಣ, ಮೈಸೂರು ಜಿಲ್ಲೆ.

3. ವಿನಯ್ ಕುಮಾರ್ ಬಿನ್ ಲೇ ಮಹದೇವಸ್ವಾಮಿ
   23 ವರ್ಷ, ವಾಸಃ ಹೆಳವರಹುಂಡಿ ಗ್ರಾಮ,
   ತಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಎನೆಂದರೆಃ-

ಮೊದಲನೆಯದಾಗಿ, ದಿಃ 11.03.2020 ರಂದು ರಾತ್ರಿ ವೇಳೆಯಲ್ಲಿ ತಿ.ನರಸೀಪುರ ಪೋಲಿಸ್ ಠಾಣಾ ವ್ಯಾಪ್ತಿಯ, ತಿ ನರಸೀಪುರ ಪಟ್ಟಣದ ತ್ರಿವೇಣಿ

ನಗರದ ಬುದ್ಧ ರಾಮ ಮಂದಿರ ರಸ್ತೆಯಲ್ಲಿರುವ, ಚಾಸಾ-7/ಕೆಂಪಮ್ಮ ರವರ ಮನೆಯ 1 ನೇ ಅಂತಸ್ತಿನಲ್ಲಿ ಚಾಸಾ-1/ಜಗದೀಶ ರವರು ವಾಸವಾಗಿದ್ದು, ಅವರು ಊರಿಗೆ ಹೋದ ಸಮಯದಲ್ಲಿ, ಸಮಾನ ಉದ್ದೇಶದಿಂದ ಆರೋಪಿತರಾದ ನೀವು ಸದರಿ ಮನೆಯ ಬಾಗಿಲು ಮತ್ತು ಬೀಗವನ್ನು ಮುರಿದು ಅಲ್ಲಿಗೆ ಅತಿಕ್ರಮ ಪ್ರವೇಶ ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 457 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಕಳ್ಳತನ ಮಾಡುವ ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಸದರಿ ಮನೆಯ ಬೀರುವಿನಲ್ಲಿಟ್ಟಿದ್ದ ರೂ.12,000/- ಹಣವನ್ನು ಕಳ್ಳತನ ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 380 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕಃ 21.03.2024 .

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ತಿ. ನರಸೀಪುರ.**

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ.**

ಸಿ ಸಿ ಸಂಖ್ಯೆ: 05/2022

**ದೋಷಾರೋಪಣೆ**

1. ಅರುಣ್ ಕುಮಾರ್ ಬಿನ್ ಮಹದೇವಸ್ವಾಮಿ
   31 ವರ್ಷ, ವಾಸಃ ಭೈರಾಪುರ ಗ್ರಾಮ,
   ತಿ ನರಸೀಪುರ ಪಟ್ಟಣ, ಮೈಸೂರು ಜಿಲ್ಲೆ.

2. ಕಿರಣ್ ಬಿನ್ ನಾಗರಾಜು
   26 ವರ್ಷ, ವಾಸಃತ್ರೀವೇಣಿ ನಗರ,
   ತಿ ನರಸೀಪುರ ಪಟ್ಟಣ, ಮೈಸೂರು ಜಿಲ್ಲೆ.

3. ವಿನಯ್ ಕುಮಾರ್ ಬಿನ್ ಲೇ ಮಹದೇವಸ್ವಾಮಿ
   23 ವರ್ಷ, ವಾಸಃ ಹೆಳವರಹುಂಡಿ ಗ್ರಾಮ,
   ತಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 21.03.2024

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ತಿ.ನರಸೀಪುರ.